ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕರಾದ ಶ್ರೀ ಟಿ ಎಂ ಕುಮಾರ್ ಅವರಿಗೆ ದಿ 31-10-2006ರ ಪತ್ರದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉತ್ತರ, ದಕ್ಷಿಣ, ಪೂರ್ವ ಪಶ್ಚಿಮ ಹಾಗೂ ಕೇಂದ್ರ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ 2002-03 ರಿಂದ 2006-2007ನೇ ಸಾಲಿನವರೆಗೆ ಪೀರೋಪಕರಣಗಳ ಖರೀದಿ, ಬುಕ್ ಬೈಂಡಿಂಗ್ ಹಾಗೂ ಪುಸ್ತಕ ಖರೀದಿ ವಿಷಯಗಳ ಬಗ್ಗೆ ತನಿಖೆ ಮಾಡಿ ವರದಿ ನೀಡಲು ಕೋರಲಾಗಿತ್ತು ಅದರಂತೆ ಶ್ರೀ ಟಿ ಎಂ ಕುಮಾರ್ ಅವರು ತನಿಖೆ ಕೈಗೊಂಡು, ದಿ 8-11-2006ರಲ್ಲಿ ವರದಿ ಸಲ್ಲಿಸಿದ್ದಾರೆ- ಸದರಿ ವರದಿಯನ್ನು ಪರಿಶೀಲಿಸಿ ಮೇಲ್ನೋಟಕ್ಕೆ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆಂದು ಕಂಡು ಬಂದಿರುವ ಅಧಿಕಾರಿ/ನೌಕರರನ್ನು ಅವರು ಕಾರ್ಯನಿರ್ವಹಿಸುತ್ತಿದ್ದ ಬೆಂಗಳೂರಿನಲ್ಲಿರುವ ಗ್ರಂಥಾಲಯಗಳಿಂದ ಬೇರೆ ಸ್ಥಳಗಳಿಗೆ ವರ್ಗ ಮಾಡಿ ದಿನಾಂಕ 9-3-2007ರಂದು ಆದೇಶ ಹೊರಡಿಸಲಾಗಿದೆ ಅವ್ಯವಹಾರಗಳ ಬಗ್ಗೆ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ವಿಶೇಷ ಆಡಿಟ್ ಮಾಡಿಸಲಾಗುತ್ತಿದ್ದು, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಸಹ ಪರಿಶೀಲಿಸಲಾಗುತ್ತಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ **1199(1395)**

ಸದಸ್ಯರ ಹೆಸರು **ಶ್ರೀ ಮುನಿಯಪ್ಪ ಎಸ್ ಎಂ (ಚಿಕ್ಕಬಳ್ಳಾಪುರ)**

ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)**

ಅ) ರಾಜ್ಯದಲ್ಲಿಯೇ ಚಿಕ್ಕಬಳ್ಳಾಪುರ ತಾಲ್ಲೂಕಿನ ಅಂತರಜಲಮಟ್ಟ ಒಂದು ಸಾವಿರ ಅಡಿಗೂ ಅಧಿಕ ಆಳಕ್ಕೆ ಕೊರೆಯುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ,

ಹೌದು

ಆ) ತಾಲ್ಲೂಕಿನಾದ್ಯಂತ ಕೆರೆಗಳು ಹೂಳು ತುಂಬಿಕೊಂಡು ನೀರು ಸಾಕಷ್ಟು ನಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಇ) ಹಾಗಿದ್ದಲ್ಲಿ, ಕೆರೆಗಳ ಹೂಳು ತೆಗೆದು ಆಧುನೀಕರಣಗೊಳಿಸಿ, ಅಂತರಜಲಮಟ್ಟ ಹೆಚ್ಚಿಸಿ ಕುಡಿಯುವ ನೀರಿನ ಮತ್ತು ಕೃಷಿ ನೀರಾವರಿ ಸುಧಾರಣೆಗಾಗಿ ಸರ್ಕಾರವು ಯಾವಯಾವ ಕ್ರಮ ಕೈಗೊಳ್ಳುತ್ತದೆ?

ಲಭ್ಯವಿರುವ ಅನುದಾನಕ್ಕನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಅಂತರ್ಜಲ ಮಟ್ಟ ಹೆಚ್ಚಿಸಲು ಸುವರ್ಣ ಆಣೆ ಎಂಬ ಕಾರ್ಯಕ್ರಮವನ್ನು ನಬಾರ್ಡ್ ಸಾಲದ ನೆರವಿನೊಂದಿಗೆ ಹಮ್ಮಿಕೊಳ್ಳಲಾಗಿದೆ ಈ ಕಾರ್ಯಕ್ರಮದಡಿ ಚಿಕ್ಕಬಳ್ಳಾಪುರ ತಾಲ್ಲೂಕಿಗೆ ರೂ 40 00 ಲಕ್ಷ ನಿಗದಿಯಾಗಿರುತ್ತದೆ ಅಲ್ಲದೆ 2007–08ರ ಬಜೆಟ್ ಭಾಷಣದಲ್ಲಿ ನೀರಾವರಿ ಕೆರೆಯ ಹೂಳು ತೆಗೆಯಲು ಹೆಚ್ಚವರಿ ಅನುದಾನ ಒದಗಿಸುವುದಾಗಿ ಪ್ರಸ್ತಾಪಿಸಲಾಗಿದ್ದು, ಸುವರ್ಣ ಆಣೆ ಕಾರ್ಯಕ್ರಮದ ಜೊತೆಗೆ ಹೆಚ್ಚುವರಿ ಅನುದಾನ ಹೂಳು ತೆಗೆಯುವ ಕಾರ್ಯಕ್ರಮಕ್ಕೆ ಲಭ್ಯವಾಗಬಹುದು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ **1202(1295)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಆಫ್ಜಲ್ ಪುರ್)**
ಉತ್ತರಿಸುವವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಗುಲ್ಬರ್ಗಾ ತಾಲ್ಲೂಕಿನ ಶರಣಸಿರಸಗಿ, ಸಿಂಧಗಿ, ತಾಜ್‌ಸುಲ್ತಾನಪುರ್, ಹಿರಾಪುರ ಗ್ರಾಮಗಳು ಗುಲ್ಬರ್ಗಾ ನಗರಕ್ಕೆ ಹೊಂದಿಕೊಂಡಿರುವುದು ನಿಜವಲ್ಲವೇ,

ನಿಜ

ಆ) ಈ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಬಹಳಷ್ಟಿದ್ದು, ಅಲ್ಲಿನ ಕೊಳವೆ ಬಾವಿಗಳು ಬತ್ತಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಬಂದಿದೆ

ಇ) ಬಂದಿದ್ದಲ್ಲಿ, ಗುಲ್ಬರ್ಗಾ ನಗರಕ್ಕೆ ಕುಡಿಯುವ ನೀರಿನ 3 ಯೋಜನೆಗಳು ಲಭ್ಯವಿರುವುದರಿಂದ ಆ ಯೋಜನೆಗಳ ಮುಖೇನ ಈ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಲು ಸರ್ಕಾರ ಸಿದ್ದವಿದೆಯೇ?

ಈ ಕುರಿತಂತೆ ಗುಲ್ಬರ್ಗಾ ಮಹಾನಗರ ಪಾಲಿಕೆಯೊಂದಿಗೆ ಸಮಾಲೋಚಿಸಿ ಹೆಚ್ಚುವರಿ ನೀರಿನ ಲಭ್ಯತೆಯಿದ್ದಲ್ಲಿ, ಸದರಿ ಗ್ರಾಮಗಳಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುವುದು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ **1203(1296)**
ಸದಸ್ಯರ ಹೆಸರು **ಶ್ರೀ ಪಾಟೀಲ್ ಎಂ ವೈ(ಆಫ್ಜಲ್ ಪುರ್)**
ಉತ್ತರಿಸುವವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು,ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಂಬೈ–ಕರ್ನಾಟಕ ಭಾಗಕ್ಕೆ ಮಾತ್ರ ಸೀಮಿತವಾಗಿರುವುದಕ್ಕೆ ಕಾರಣವೇನು,

ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಂಬಯಿ–ಕರ್ನಾಟಕ ಭಾಗಕ್ಕೆ ಸೀಮಿತವಾಗಿರದೆ, ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯಿಸುತ್ತದೆ